ಶ್ರೀ ರಾಮಕೃಷ್ಣ ಹೆಗಡೆ.—ಅವರು ಎಲ್ಲಿ ಎಂದು ಹೇಳಲಿಲ್ಲ.

ಶ್ರೀ ಬಸವರಾಜ ಹಾವಗಪ್ಪ ಪಾಟೀಲ್.—ಹುಮನಾಬಾದ್‌ನಲ್ಲಿ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಹುಮಾನಾಬಾದ್‌ನಲ್ಲಿ ಇಲ್ಲ ಎಂದರೆ ತಕ್ಷಣ ಒಂದು ಹಳೆಯ ಜೀಪು ನ್ನಾದರೂ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೆ ನಿಮ್ಮ ಪ್ರಶ್ನೆಯನ್ನು (೪೬೬) ಅನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಏಡ್ಸ್ ರೋಗವನ್ನು ಪತ್ತೆ ಹಚ್ಚಲು ಕಾರ್ಯಕ್ರಮಗಳು

೧೧೯೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ರೋಗ ತಗಲಿರುವ ಮಹಿಳೆಯರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಕೈಗೊಂಡಿರುವ ಕ್ರಮವೇನು ?

ಆ) ರಾಜ್ಯದಲ್ಲಿ ಏಡ್ಸ್ ತಗುಲಿರುವ ರೋಗಿಗಳ ಸಂಖ್ಯೆ ಎಷ್ಟು ?

ಇ) ರಾಜ್ಯದಲ್ಲಿ ಏಡ್ಸ್ ರೋಗ ಪತ್ತೆ ಹಚ್ಚಲು ಹಾಕಿಕೊಂಡಿರುವ ಕಾರ್ಯ ಕ್ರಮವೇನು ?

ಈ) ರಾಜ್ಯದಿಂದ ಪರರಾಷ್ಟ್ರಕ್ಕೆ ಹೋಗಿ ಬಂದಿರುವ ವ್ಯಕ್ತಿಗಳ ರಕ್ತ ತಪಾಸಣೆಗಾಗಿ ತೆಗೆದು ಕೊಳ್ಳಲಾಗಿರುವ ಕಾರ್ಯಕ್ರಮವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ಕಾಯಿಲೆಗೆ ತುತ್ತಾದ ಮಹಿಳೆಗೆ ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನಂತರ ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. ನಂತರ ಬೆಳಗಾವಿ ಯಲ್ಲಿರುವ ರಿಜೆಫಷನ್ ಕೇಂದ್ರಕ್ಕೆ ವರ್ಗಾಯಿಸಲಾಗಿದ್ದು. ಬೆಳಗಾವಿ ಜಿಲ್ಲಾ ಶಸ್ತ್ರ ಚಿಕಿತ್ಸಕರ ನೇತೃತ್ವದಲ್ಲಿ ತಜ್ಞ ವೈದ್ಯರುಗಳ ಒಂದು ತಂಡದಿಂದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗು ತ್ತಿದೆ.

ಆ) ಒಂದು

ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

---

೧ ಏಡ್ಸ್ ರೋಗ ಪತ್ತೆ ಹಚ್ಚಲು ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಮೈಕ್ರೊ ಬಾಯಾಲಜಿ ಇಲಾಖೆಯಲ್ಲಿ ಏಡ್ಸ್ ಸರ್ವಿಲೈನ್ಸ್ ಘಟಕ ಸ್ಥಾಪಿಸಲಾಗಿದೆ.

೨ ರಾಜ್ಯದ ವಿವಿಧ ವೈದ್ಯಕೀಯ ಸಂಸ್ಥೆಗಳಿಂದ ಆನುಮಾನವುಳ್ಳ ಪ್ರಕರಣಗಳ ರಕ್ತದ ಮಾದರಿ ಗಳನ್ನು ಪರೀಕ್ಷೆ ಮಾಡಲು ಏರ್ಪಾಡು ಮಾಡಲಾಗಿದೆ.

ಈ) ಏಡ್ಸ್ ಬಗ್ಗೆ ಭಾರತ ಸರ್ಕಾರವು ಕಾನೂನು ತಯಾರಿಸುತ್ತಿದ್ದು, ಅದರ ತೀರ್ಮಾನಕ್ಕಾಗಿ ಕಾಯಲಾಗುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸೌಂದತ್ತಿ ತಾಲ್ಲೂಕಿನಲ್ಲಿ ಏಡ್ಸ್ ರೋಗಕ್ಕೆ ಒಳಗಾಗಿರು ವಂತೆ ಒಬ್ಬ ಮಹಿಳೆಯನ್ನು ಗುರುತಿಸಲಾಗಿದೆ. ಇದರ ಹಿನ್ನೆಲೆ ಏನು ? ರಾಜ್ಯದಲ್ಲಿ ಇತರ ಬಗೆ ಏನಾದರೂ ಸಮೀಕ್ಷೆ ನಡೆದಿದೆಯೇ ? ಆ ಮಹಿಳೆಯನ್ನು ರಿಜೆಷ್ಟನ್ ಕೇಂದ್ರಕ್ಕೆ ವರ್ಗಾಯಿಸಿದ ಮೇಲೆ ಸುತ್ತಮುತ್ತಲೂ ಇರತಕ್ಕ ಜನ ಬೇರೆ ಕಡೆಗೆ ವರ್ಗಾಯಿಸಬೇಕೆಂದೂ ಒತ್ತಾಯ ಮಾಡಿರುವುದಲ್ಲದೆ, ಆಕೆಯು ಇಡೀ ಮನೆತನದ ಮೇಲೆ ಸಾರ್ವಜನಿಕ ಬಹಿಷ್ಕಾರ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಏಡ್ಸ್ ರೋಗವನ್ನು ಪತ್ತೆಹಚ್ಚಲಿಕ್ಕೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ಘಟಕ ವನ್ನು ಪ್ರಾರಂಭ ಮಾಡಲಾಗಿದೆಯೆಂದು ಹೇಳಿದ್ದೀರಿ. ಇಷ್ಟು ಭಯಂಕರ ರೋಗವಾಗಿದ್ದು ರಾಜ್ಯ ಮಟ್ಟದಲ್ಲಿ ಬೇರೆ ಕಡೆ ಇಂತಹ ಒಂದು ಘಟಕವನ್ನು ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಕರ್ನಾಟಕದಲ್ಲಿರತಕ್ಕ ಬ್ಲಡ್ ಬ್ಯಾಂಕಿನಲ್ಲಿ ಏಡ್ಸ್ ರೋಗಕ್ಕೆ ಒಳಗಾಗಿರುವ ಜನಗಳು ಬಂದು ರಕ್ತ ಕೊಡತಕ್ಕ ವ್ಯವಸ್ಥೆ ನಡೆಯುತ್ತಿದೆ, ಇಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ದೆಹಲಿಯಲ್ಲಿರತಕ್ಕ ರಾಷ್ಟ್ರೀಯ ಏಂಟು ರೋಗ ಸಂಸ್ಥೆಯವರು, ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿರುವ ದೇವದಾಸಿ ಕುಟುಂಬಗಳ ಸಮೀಕ್ಷೆ ನಡೆಸಿದ ಸಂದರ್ಭದಲ್ಲಿ ಸುಮಾರು ೧೧೩ಜನರ ಪೈಕಿ, ೨೦ ವರ್ಷ ವಯಸ್ಸಿನ ಒಬ್ಬ ಮಹಿಳೆಗೆ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಿದಾಗ ಆಕೆ ಏಡ್ಸ್ ರೋಗಕ್ಕೆ ತುತ್ತಾಗಿದ್ದಾಳೆಂದು ಪ್ರಸ್ತುತ ಪಡಿಸಿದರು, ಸವದತ್ತಿ ತಾಲ್ಲೂಕಿನ ಆಸ್ಪತ್ರೆಯಲ್ಲಿ ಆಕೆಗೆ ಪರೀಕ್ಷೆ ನಡೆಸಿ ಮುಂದಿನ ಕ್ರಮಕ್ಕಾಗಿ ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿ ನಂತರ ಅಲ್ಲಿಂದ ರೆಸಿಪ್‌ಷನ್ ಕೇಂದ್ರಕ್ಕೆ ವರ್ಗ ಮಾಡಿದ್ದಾರೆ. ಮಾನಸಿಕವಾಗಿ ಆಗತಕ್ಕ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿ ವಸತಿ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಎಂಬ ಬಗ್ಗೆ ಕೇಂದ್ರಸರ್ಕಾರವನ್ನು ಕೇಳಿದ್ದೇವೆ, ಅಲ್ಲಿಂದ ಬಂದಮೇಲೆ ಪ್ರತ್ಯೇಕವಾಗಿ ವಸತಿ ಸೌಕರ್ಯ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ಮಾನಸಿಕವಾಗಿ ಅಂಥಿಂಥ ತೊಂದರೆಯಲ್ಲ. ಅಲ್ಲಿ ಆ ಮಹಿಳೆಯ ಕುಟುಂಬವನ್ನು ಸಂಪೂರ್ಣವಾಗಿ ಬಹಿಷ್ಕಾರ ಮಾಡಿದ್ದಾಗಿದೆ. ಆದ್ದರಿಂದ ನಾನು ಕೇಳುತ್ತಿದ್ದೇನೆ. ಅಲ್ಲಿ ಬ್ಲಡ್ ಬ್ಯಾಂಕ್‌ಗೆ ರಕ್ತ ಕೊಡಲು ಬರುವವರಲ್ಲಿ ಏಯ್ಡ್ಸ್ ರೋಗ ಇರತಕ್ಕವರು ಇರುತ್ತಾರೆ. ಅಂಥವರಿಂದ ರಕ್ತ ತೆಗೆದುಕೊಳ್ಳುವುದು ಬಹಳ ಅಪಾಯಕಾರಿ. ಆದ್ದರಿಂದ ಅವರ ರಕ್ತವನ್ನು ತೆಗೆದುಕೊಳ್ಳಬಾರದೆಂದು ಸರ್ಕಾರದಿಂದ ನಿರ್ದಿಷ್ಟವಾದ ಸೂಚನೆಯನ್ನೇ ಏನಾದರೂ ನೀಡುತ್ತೀರಾ?

ಇನ್ನೊಂದು ವಿಚಾರ ಎಂದರೆ, ಇದಕ್ಕೆ ಸಂಬಂಧಪಟ್ಟಂತೆ ವಿಕ್ಟೋರಿಯ ಆಸ್ಪತ್ರೆಯಲ್ಲಿ ಏಯ್ಡ್ಸ್ ಸಂಶೋಧನಾ ಘಟಕವನ್ನು ತೆರೆಯುವ ನಿರೀಕ್ಷೆ ಇದೆಯೆಂದು ಕೇಳಿಬರುತ್ತಿದೆ. ಇದು ಬಹಳ ಅಪಾಯಕಾರಿಯಾದ್ದರಿಂದ ನಗರದ ಹೊರ ವಲಯದಲ್ಲಿ ಇದರ ಸಂಶೋಧನಾಲಯವನ್ನು ತೆರೆಯುವುದು ಉತ್ತಮ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಏನಾದರೂ ಸಲಹೆಯನ್ನು ಮಾಡಿದ್ದೀರಾ? ಇನ್ನೊಂದು ವಿಚಾರ ಎಂದರೆ ನಮ್ಮ ಕರ್ನಾಟಕ ರಾಜ್ಯದಿಂದ ಹಲವಾರು ಜನರು ಹೊರದೇಶಗಳಿಗೆ ಹೋಗಿ ಬಂದಿದ್ದಾರೆ ಆರೀತಿ ಹೋಗಿಬಂದಿರುವವರ ರಕ್ತವನ್ನು ತೆಗೆದುಕೊಂಡು ತಪಾಸಣೆಯನ್ನು ಮಾಡಲಾಗಿದೆಯೆ? ಏಕೆಂದರೆ ಮಂತ್ರಿಗಳಲ್ಲಿ ಕೆಲವರು ಹೊರದೇಶಗಳಿಗೆ ಹೋಗಿ ಬಂದಿದ್ದಾರೆ. ಶಾಸಕರಲ್ಲಿ ಕೆಲವರು ಹೋಗಿಬಂದಿದ್ದಾರೆ, ತಾವೂ ಕೂಡ ಹೋಗಿ ಬಂದಿದ್ದೀರಿ. ಈ ರೀತಿ ಹೋಗಿ ಬಂದವರೆಲ್ಲರ ರಕ್ತವನ್ನು ತೆಗೆದುಕೊಂಡು ಅದನ್ನು ತಪಾಸಣೆ ಮಾಡಲಾಗಿದೆಯೇ? ಅಥವಾ ಇದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಒಂದು ನಿಯಮ ಇದೆ. ಹೊರದೇಶಗಳಿಗೆ ಹೋಗುವುದಕ್ಕೆ ಮುಂಚಿತವಾಗಿ ಆ ವ್ಯಕ್ತಿಗಳನ್ನು ಪರೀಕ್ಷೆಮಾಡಿ, ಇಂಜಕ್ಷನ್ ಕೊಟ್ಟು ಕಳುಹಿಸುತ್ತಾರೆ. ನಂತರ ಅವರು ವಾಪಸ್ಸು ಬಂದಮೇಲೆ ಮತ್ತೊಮ್ಮೆ ಅವರ ರಕ್ತವನ್ನು ತಪಾಸಣೆ ಮಾಡತಕ್ಕ ವ್ಯವಸ್ಥೆ ಇದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಹೋದವರು ಸುರಕ್ಷಿತವಾಗಿ ಬಂದಿದ್ದಾರೆಯೇ?

ಶ್ರೀ ಬಿ. ರಾಚಯ್ಯ.—ಬಂದಿದ್ದಾರೆ. ಯಾರಿಗಾದರೂ ಏಯ್ಡ್ಸ್ ರೋಗ ಇದ್ದರೆ ಆ ರೋಗ ಬೇರೆಯವರಿಗೆ ತಗುಲಬಾರದು, ಆದ್ದರಿಂದ ಇದರ ಬಗ್ಗೆ ಎಚ್ಚರಿಕೆಯನ್ನು ತೆಗೆದುಕೊಂಡು ಸೂಕ್ತ ಪ್ರತಿಬಂಧಕ ಕ್ರಮ ಕೈಗೊಳ್ಳಬೇಕೆಂದು ನಾವು ಆರೋಗ್ಯ ಇಲಾಖೆಗೆ ನಿರ್ದೇಶನ ನ್ನು ಕೊಟ್ಟಿದ್ದೇವೆ. ಆದರೆ ಈಗ ಇದು ಒಂದೇ ಒಂದು ಪ್ರಕರಣ ಇರುವುದರಿಂದ ಆಕೆಯನ್ನು ಪ್ರತ್ಯೇಕವಾಗಿ ಇಟ್ಟು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟವರಿಗೆ ನಾವು ನಿರ್ದೇಶನವನ್ನು ಕೊಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮಹತ್ವವಾದ ಪ್ರಶ್ನೆ. ಇದು ಬೆಳಗಾಂನಲ್ಲಿ ಆಗಿರತಕ್ಕದ್ದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ಏಯ್ಡ್ಸ್ ರೋಗಕ್ಕೆ ತುತ್ತಾಗಿರತಕ್ಕ ಆ ಮಹಿಳೆಗೆ ಅಥವಾ ಆಕೆಯ ಕುಟುಂಬಕ್ಕೆ ಮಾಸಾಶನವನ್ನು ಕೊಡತಕ್ಕ ಯೋಜನೆಯನ್ನೇನಾದರೂ ಮಾಡುತ್ತೀರಾ? ಅಥವಾ ಆಕೆಯ ಜೀವನಕ್ಕೆ ಅನುಕೂಲವಾಗುವಂತೆ ಬೇರೆ ಇನ್ನೇನಾದರೂ ವ್ಯವಸ್ಥೆ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಈರೀತಿ ಏಯ್ಡ್ಸ್ ರೋಗಕ್ಕೆ ತುತ್ತಾದಂಥ ಮಹಿಳೆಯರಿಗೆ, ಅಥವಾ ಮಹಿಳೆಯರಿಗೆ ಮಾಸಾಶನವನ್ನು ಕೊಡತಕ್ಕ ಯೋಜನೆಯನ್ನು ನಾವು ಜಾರಿಗೆ ತಂದಿಲ್ಲ. ಈಗ ನಾವು ಸ್ವಾತಂತ್ರ್ಯ ಹೋರಾಟಗಾರರಿಗೆ, ವಿಧವೆಯರಿಗೆ, ವೈದ್ಧರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಅವರಿಗೆ ಮಾತ್ರ ನಾವು ಮಾಸಾಶನವನ್ನು ಕೊಡುತ್ತಿದ್ದೇವೆ. ಆದರೆ ಏಯ್ಡ್ಸ್ ರೋಗಕ್ಕೆ ಬಲಿಯಾದವರಿಗೆ ಮಾಸಾಶನವನ್ನು ಕೊಡತಕ್ಕ ಯೋಜನೆ ನಮ್ಮಲ್ಲಿ ಇನ್ನೂ ಬಂದಿಲ್ಲ. ಮಾನ್ಯ ಸದಸ್ಯರಿಗೆ ಹೇಳುತ್ತೇನೆ, ಸಾರ್ವಜನಿಕರಿಂದ ಒಂದು ನಿಧಿಯನ್ನು ಉದಾರ ಭಾವನೆಯಿಂದ ಎತ್ತಿ ಅಕೆಯ ಕುಟುಂಬಕ್ಕೆ ಕೊಡಬಹುದು ಅಷ್ಟೆ.

ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ವಲಸೆ.

೧೩೬೭. ಶ್ರೀಯುತ ಎನ್. ಎಸ್. ಖೇಡ್, (ಇಂಡಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂಗೀಕೃತ ವೈದ್ಯಕೀಯ ಕಾಲೇಜುಗಳಲ್ಲಿ ಮೈಗ್ರೇಷನ್ ವರ್ಗಾವಣೆ ಬಗ್ಗೆ ಎಮ್.ಸಿ.ಐ. ನಿಯಮಾನುಸಾರ ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತಿದ್ದಾರೆಯೇ?

ಆ) ಹಾಗಿದ್ದಲ್ಲಿ ಸರಕಾರಿ ಮೆರಿಟ್ ಕೋಟಾ ಹಾಗೂ ಆಡಳಿತ ಮಂಡಳಿಯ ಕೋಟಾ ಅಭ್ಯರ್ಥಿಗಳೆಂದು ತಾರತಮ್ಯ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಇದನ್ನು ಹೋಗಲಾಡಿಸಿ ಸದರೀ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಕೈಗೊಂಡ ಕ್ರಮವೇನು?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಸರಕಾರವು ಮಾರ್ಗ ಸೂಚಿಗಳನ್ನು ಹೊರಡಿಸಿದೆ.

ಆ) ಬಂದಿದೆ.

ಇ) ಭಾರತೀಯ ವೈದ್ಯ ಪರಿಷತ್ತು ಸರಕಾರಿ ಸ್ಥಾನ ಮತ್ತು ಖಾಸಗಿ ಸ್ಥಾನ ಇವುಗಳಲ್ಲಿ ತಾರತಮ್ಯ ಮಾಡುವುದಿಲ್ಲ. ಆದರೆ ಸರ್ಕಾರದವರು ಖಾಸಗೀ ಸ್ಥಾನದಿಂದ ಸರ್ಕಾರಿ ಸ್ಥಾನಕ್ಕೆ ವರ್ಗಾವಣೆ ಮಾಡಲು ಅನುಮತಿ ಕೊಡುವುದಿಲ್ಲ. ಏಕೆಂದರೆ ಸರ್ಕಾರಿ ಸ್ಥಾನಗಳು ಅರ್ಹತೆಯ ಮೇಲೆ ಇರುವ ಸ್ಥಾನಗಳಿರುತ್ತವೆ. ಆದರೆ ಮ್ಯಾನೇಜ್‌ಮೆಂಟ್ ಸ್ಥಾನಗಳು ಹಾಗಿರುವುದಿಲ್ಲ.

ಶ್ರೀ ಎನ್. ಎಸ್. ಖೇಡ್.—ಮಾನ್ಯ ಅಧ್ಯಕ್ಷರೆ, ಒಂದು ಕಾಲೇಜಿನಿಂದ ಇನ್ನೊಂದು ಕಾಲೇಜಿನಲ್ಲಿ ಸರ್ಕಾರೀ ಸ್ಥಾನದಿಂದ ಅಥವಾ ಮೆರಿಟ್‌ನಿಂದ ತುಂಬಿಬಂಧ ಸ್ಥಾನಗಳ ಬಗ್ಗೆ ನಾವು ಕೇಳಿದ್ದೂ. ಅಷ್ಟೇ ಅಲ್ಲ ಮಾನ್ಯತೆ ಪಡೆದಂಥ ಒಂದು ಕಾಲೇಜಿನಿಂದ ಇನ್ನೊಂದು ಮಾನ್ಯತೆಯನ್ನು ಪಡೆಯಂದ ಕಾಲೇಜಿನ ಬಗ್ಗೆ ಏನೂ ನಾವು ಕೇಳಿಲ್ಲ. ಯಾವ ಕ್ರೈಟೇರಿಯಾ ಇದೆಯೋ ಅದೇ ಕ್ರೈಟೇರಿಯಾದಲ್ಲಿ ನಾವು ಕೇಳಿದಾಗ ಸರ್ಕಾರದಿಂದ ಅನ್ಯಾಯ ಆಗಿದೆ ಎಂದು ಕಂಡುಬಂದಿದ್ದರಿಂದ ನಾವು ಸ್ಪಷ್ಟವಾಗಿ ಇದರ ಬಗ್ಗೆ ಕೇಳಿದ್ದೇವೆ. ಐ.ಎಂ.ಎ.ನಿಂದ ಬಂದಂಥ ಲೆಟರ್‌ನ್ನೂ ಆವರಿಗೆ ಕೊಟ್ಟಿದ್ದೇವೆ. ಹಿಂದೆ ಮಾನ್ಯ ಬಸವಲಿಂಗಪ್ಪನವರೋ ಅಥವಾ ಮಾನ್ಯ ಖಾರ್ಗೆಯವರೋ ಈ ಪ್ರಶ್ನೆಯನ್ನು ಕೇಳಿದಾಗಲೂ ಕೂಡ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡದೆ ಹಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ. ಸಮಂಜಸವಾದ ಉತ್ತರವನ್ನು ಅವರು ಕೊಟ್ಟಿಲ್ಲ. ಆದ್ದರಿಂದ ಇದನ್ನು ಈಗಲಾದರೂ ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಸರ್ಕಾರೀ ಕೋಟಾದಲ್ಲಿ ಮೆರಿಟ್‌ಮೇಲೆ ಬರತಕ್ಕ ವಿದ್ಯಾರ್ಥಿಗಳಿಗೆ ಅಥವಾ ಮ್ಯಾನೇಜ್‌ಮೆಂಟ್‌ಸವರು ತೆಗೆದುಕೊಂಡಿರತಕ್ಕ ವಿದ್ಯಾರ್ಥಿಗಳಿಗೆ ಬೇರೆಬೇರೆ ರೀತಿಯಲ್ಲಿ ನಾವೇನೂ ತಾರತಮ್ಯವನ್ನು ತೋರಿಸಿಲ್ಲ. ಖಾಸಗಿ ಕಾಲೇಜುಗಳು ಜಾಸ್ತಿ ಇರುವುದರಿಂದ ಮೆರಿಟ್ ಇರತಕ್ಕವರಿಗೆ ನಾವು ಅವಕಾಶವನ್ನು ಕೊಡಬೇಕಾಗುತ್ತದೆ.